ಪತ್ರಿಕೆ : NAME OF THE NEWS PAPER : ವಿಶ್ವವಾಣಿ

ದಿನಾಂಕ : DATE : 23/8/2019

ಬಳಕೆಯಾಗದೇ ಉಳಿದ ಶಾಸಕರ ಪ್ರದೇಶಾಭಿವೃದ್ಧಿ ಅನುದಾನ । ಕಳೆದ ವರ್ಷದಲ್ಲಿ 893 ಕೋಟಿ ರು. ಅನುದಾನ ಬಾಕಿ ಇದೆ । 24 ಶಾಸಕರು ಅನುದಾನದ ಒಂದು ರುಪಾಯಿಯನ್ನೂ ವಿನಿಯೋಗಿಸಿಲ್ಲ । ತಾತ್ಕಾಲಿಕವಾಗಿ ಪ್ರಕೃತಿ ವಿಕೋಪದಂತಹ ಸಮಸ್ಯೆಗಳಿಗೆ ಉಪಯೋಗಿಸಿಕೊಳ್ಳಲು ಶಾಸಕರಿಗೆ ಮುಖ್ಯಮಂತ್ರಿ ಪತ್ರ

# ಅನುದಾನ ಬಳಕೆಯಲ್ಲಿ ಶಾಸಕರ ಉದಾಸೀನ

23-8-19

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ಕಾಂಗ್ರೆಸ್-ಜೆಡಿಎಸ್ ಮೈತ್ರಿ ಸರಕಾರದಲ್ಲಿ ಶಾಸಕರಿಗೆ ತಮ್ಮ ಕ್ಷೇತ್ರದ ಕೆಲಸಗಳಿಗೆ ಅನುದಾನ ನೀಡುತ್ತಿರಲಿಲ್ಲ ಎನ್ನುವ ಆರೋಪ ಕೇಳಿಬಂದಿತ್ತು. ಆದರೀಗ ಅನೇಕ ಶಾಸಕರು ತಮ್ಮ ಕ್ಷೇತ್ರಾಭಿವೃದ್ಧಿ ಅನುದಾನ ಬಳಸಿಕೊಳ್ಳದೇ ಸೋಂಬೇರಿತನಕ್ಕೆ ಜಾರಿದ್ದಾರೆ.

ರಾಜ್ಯದಲ್ಲಿ ಯಾವುದೇ ಪಕ್ಷ ಅಧಿಕಾರದ ಗದ್ದುಗೆ ಹಿಡಿದರೂ, ಪ್ರತಿಯೊಂದು ಕ್ಷೇತ್ರದ ಶಾಸಕರ ನಿಧಿಯಲ್ಲಿ ಕ್ಷೇತ್ರದ ಅಭಿವೃದ್ಧಿಗೆಂದು ಎರಡು ಕೋಟಿ ಅನುದಾನವಿರುತ್ತದೆ. ಈ ಹಣ ಸರಕಾರ ವಿವಿಧ ಯೋಜನೆಗೆಂದು ನೀಡುವ ಅನುದಾನ ಹೊರತುಪಡಿಸಿ, ಶಾಸಕರು ತಮ್ಮ ವಿವೇಚನೆಗೆ ತಕ್ಕಂತೆ ಬಳಸಿಕೊಳ್ಳಬೇಕು. ಆದರೆ 2018-19ನೇ ಹಾಗೂ 2019-20ನೇ ಸಾಲಿನಲ್ಲಿ ಬಹುತೇಕ ಶಾಸಕರು ಈ ಅನುದಾನ ಬಳಸಿಕೊಳ್ಳದೇ ಬರೋಬ್ಬರಿ 893 ಕೋಟಿ ರು.ಗಳನ್ನು ಜಿಲ್ಲಾಧಿಕಾರಿಗಳ ಬಳಿಯೇ ಬಿಟ್ಟಿದ್ದಾರೆ ಎನ್ನುವುದು ದಾಖಲೆಗಳಿಂದ ಬಹಿರಂಗವಾಗಿದೆ.

ಸರಕಾರ ಬಿಡುಗಡೆ ವರದಿಯಲ್ಲಿ ಈ ಅಂಶ ಬಹಿರಂಗವಾಗಿದ್ದು, ರಾಜ್ಯದಲ್ಲಿ 224 ವಿಧಾನಸಭೆ ಹಾಗೂ 75 ವಿಧಾನಪರಿಷತ್ ಸದಸ್ಯರಿದ್ದು, ಈ ಎಲ್ಲರಿಗೂ ಎರಡು ಕೋಟಿಯಂತೆ ಪ್ರತಿ ವರ್ಷ ಒಟ್ಟು 650 ಕೋಟಿ ರು. ಶಾಸಕರ ಕ್ಷೇತ್ರಾಭಿವೃದ್ಧಿಗೆ ಬಿಡುಗಡೆಯಾಗುತ್ತದೆ. ಆದರೆ 2018-19, 2019-20ನೇ ಸಾಲಿನಲ್ಲಿ 1,300 ಕೋಟಿ ಪೈಕಿ ಕೇವಲ 407 ಕೋಟಿ ರು. ಮಾತ್ರ ಖರ್ಚಾಗಿದ್ದು, ಬಾಕಿ ಹಣ ಸಂಬಂಧಿಸಿದ ಜಿಲ್ಲಾಧಿಕಾರಿ ಖಾತೆಯಲ್ಲಿಯೇ ಉಳಿದಿದೆ.



ಸಾಂದರ್ಭಿಕ ಚಿತ್ರ

2018-19ನೇ ಸಾಲಿನಲ್ಲಿ ವಿಧಾನಸಭೆಯ 225 ಶಾಸಕರಿಗೆ 500 ಕೋಟಿ ರು.ನಲ್ಲಿ 266 ಕೋಟಿ ರು. ಮಾತ್ರ ಖರ್ಚಾಗಿದ್ದು, ಇದರಲ್ಲಿ 6,057 ಕಾಮಗಾರಿಗಳಿಗೆ ಕ್ರಿಯಾ ಯೋಜನೆ ಸಲ್ಲಿಸಲಾಗಿದೆ. ಇನ್ನು 183.84 ಕೋಟಿ ರು. ಯೋಜನೆಗೆ ಕ್ರಿಯಾ ಯೋಜನೆಯೂ ನೀಡಿಲ್ಲ, ಅನುದಾನವೂ ಖರ್ಚಾಗಿಲ್ಲ, ಬಿಡುಗಡೆಯಾದ ಅನುದಾನ ಯಾವ ಹಂತದಲ್ಲಿದೆ ಎನ್ನುವ ಬಗ್ಗೆ ಬಹುತೇಕ ಶಾಸಕರಿಗೆ ಮಾಹಿತಿಯೇ ಇಲ್ಲವಾಗಿದೆ ಎನ್ನುವ ಮಾತುಗಳು ಕೇಳಿಬಂದಿದೆ. 2018-19ರಲ್ಲಿ 293 ಕೋಟಿ ಬಾಕಿ ಉಳಿದಿದ್ದರೆ, 2019-2020ರಲ್ಲಿ 600 ಕೋಟಿ ರು. ಉಳಿದಿದೆ.

## ಯಾವುದಕ್ಕೆ ಬಳಸಬಹುದು?

ನೆರೆ ಮತ್ತು ಅತಿವೃಷ್ಟಿ ಹಿನ್ನೆಲೆಯಲ್ಲಿ ಮನೆ ಕಳೆದುಕೊಂಡವರಿಗೆ ಪರಿಹಾರ, ಸಾರ್ವಜನಿಕ ಶಾಲೆ, ಕಾಲೇಜು, ವಸತಿ ನಿಲಯ, ಆಸ್ಪತ್ರೆ, ವಿದ್ಯುತ್ ಕಂಬ, ಪುನರ್ವಸತಿ, ಸಾರ್ವಜನಿಕ ರಸ್ತೆ ಸಂಪರ್ಕಗಳನ್ನು ಮರು ನಿರ್ಮಾಣ ಮಾಡಲು ಶಾಸಕರು ತಮ್ಮ ನಿಧಿಯ ಅನುದಾನ ಬಳಸಿಕೊಳ್ಳಬಹುದು. ಈ ರೀತಿ ಶಾಸಕರ ಕ್ಷೇತ್ರಾಭಿವೃದ್ಧಿ ಅನುದಾನ ಬಳಸಿಕೊಂಡರೆ, ಇದಕ್ಕೆ ಸರಕಾರ ನೀಡಬೇಕಾದ ಆರ್ಥಿಕ ಹೊರೆ ತಗ್ಗುತ್ತದೆ.



## ಹಣ ವಿನಿಯೋಗಕ್ಕೆ ಸಿಎಂ ಮನವಿ

ರಾಜ್ಯದಲ್ಲಿರುವ ಪ್ರಾಕೃತಿಕ ವಿಕೋಪದಿಂದ ಜನ ಸಂಕಷ್ಟಕ್ಕೆ ಸಿಲುಕಿದ್ದು, ಪ್ರದೇಶಾಭಿವೃದ್ಧಿ ನಿಧಿಯ ಮೊತ್ತವನ್ನು ತಾತ್ಕಾಲಿಕವಾಗಿ ನೆರೆ, ಬರ, ಪ್ರಕೃತಿ ವಿಕೋಪದಂತಹ ಸಮಸ್ಯೆಗಳ ನಿವಾರಣೆಗೆ ಬಳಸಿಕೊಳ್ಳಿ ಎಂದು ಮುಖ್ಯಮಂತ್ರಿ ಯಡಿಯೂರಪ್ಪ ಎಲ್ಲ ಶಾಸಕರಿಗೆ ಪತ್ರ ಬರೆದಿದ್ದಾರೆ. ಒಂದು ವೇಳೆ ಈ ಅನುದಾನವನ್ನು ಬಳಸಿಕೊಳ್ಳಲು ಸಾಧ್ಯವಾಗದಿದ್ದರೆ, ಶಾಸಕರ ನಿಧಿಯನ್ನು ಮುಖ್ಯಮಂತ್ರಿಗಳ ಪ್ರಕೃತಿ ವಿಕೋಪ ಪರಿಹಾರ ನಿಧಿಗೆ ವರ್ಗಾಯಿಸುವಂತಹ ತೀರ್ಮಾನವನ್ನಾದರೂ ವಿಧಾನ ಮಂಡಲದ ಉಭಯ ಸದನಗಳ ಸದಸ್ಯರು ಕೈಗೊಳ್ಳಬೇಕಾಗಿದೆ ಎಂದು ಪತ್ರ ಬರೆದಿರುವ ಮುಖ್ಯಮಂತ್ರಿ ಅವರು ತಮ್ಮ ಅನುದಾನವನ್ನು ನೆರೆ ಸಂತ್ರಸ್ತರ ಕಣ್ಣೀರು ಒರೆಸಲು ಬಳಸಿ ಎಂದಿದ್ದಾರೆ.

## ಹಣ ಉಪಯೋಗಿಸದ 35 ಶಾಸಕರು

ರಾಜ್ಯದಲ್ಲಿರುವ ವಿಧಾನಸಭೆ ಹಾಗೂ ಪರಿಷತ್‌ನಲ್ಲಿರುವ ಒಟ್ಟು 300 ಶಾಸಕರ ಶೇ.10ರಷ್ಟು ಶಾಸಕರು (11 ವಿಧಾನಸಭೆ, 24 ವಿಧಾನಪರಿಷತ್ ಒಟ್ಟು 35 ಶಾಸಕರು ಶೂನ್ಯ ಸಾಧನೆಯನ್ನು ಮಾಡಿದ್ದಾರೆ. ಇನ್ನುಳಿದಂತೆ ಬಹುತೇಕ ಶಾಸಕರು ಅನುದಾನದ ಶೇ.80ರಷ್ಟು ಹಣವನ್ನು ಖರ್ಚು ಮಾಡಲು ಮನಸ್ಸು ಮಾಡಿಲ್ಲ. ಆದರೆ ದಕ್ಷಿಣ ಕನ್ನಡ ಭಾಗದ ಶಾಸಕರು ಸೇರಿದಂತೆ ಒಟ್ಟು ಶೇ.35-40ರಷ್ಟು ಶಾಸಕರು ಮಾತ್ರ ಈ ಅನುದಾನವನ್ನು ಸಮರ್ಪಕವಾಗಿ ಬಳಸಿಕೊಂಡಿದ್ದಾರೆ ಎನ್ನುವುದು ತಿಳಿದುಬಂದಿದೆ. ಇನ್ನು 75 ಜನ ವಿಧಾನಪರಿಷತ್ ಸದಸ್ಯರಲ್ಲಿ 24 ಮಂದಿ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಯಲ್ಲಿ ಹಣ ಏನಾಗಿದೆ ಎಂಬುದನ್ನು ನೋಡಿಲ್ಲ. ಉಳಿದಂತೆ ಬಹುತೇಕ ಶಾಸಕರು ಬೆರಳೆಣಿಕೆಯಷ್ಟು ಕಾಮಗಾರಿಗಳಿಗೆ ನೀಡಲಾದ ಅನುದಾನದಲ್ಲಿ ಒಪ್ಪಿಗೆ ಪಡೆದುಕೊಂಡಿದ್ದಾರೆ. ಒಬ್ಬರು ಮೂರು, ಐದು, 10 ಕಾಮಗಾರಿಗಗಳಿಗೆ ಮಾತ್ರ ಒಪ್ಪಿಗೆ ಪಡೆದಿದ್ದಾರೆ ಎಂದು ತಿಳಿದುಬಂದಿದೆ. ರಾಜ್ಯದಲ್ಲಿರುವ ಬರ, ನೆರೆ ಪರಿಹಾರಕ್ಕೆ ಈ ಅನುದಾನವನ್ನು ಶಾಸಕರು ಬಳಸಿಕೊಂಡರೆ ಸರಕಾರದ ಮೇಲಿನ ಆರ್ಥಿಕ ಹೊರೆ ತಗ್ಗುತ್ತದೆ. ಆದ್ದರಿಂದ ಈ ಅನುದಾನ ಬಳಸಿಕೊಳ್ಳುವಂತೆ ಮುಖ್ಯಮಂತ್ರಿ, ಯಡಿಯೂರಪ್ಪ ಅವರು ಎಲ್ಲ ಶಾಸಕರಿಗೆ ಪತ್ರ ಬರೆದಿದ್ದಾರೆ. 2018-19ನೇ ಸಾಲಿನಲ್ಲಿ ಮುಖ್ಯಮಂತ್ರಿಯಾಗಿದ್ದ ಕುಮಾರಸ್ವಾಮಿ ಅವರು ಎಲ್ಲ ಶಾಸಕರಿಗೆ ಅನುದಾನ ಬಳಸಿಕೊಳ್ಳುವಂತೆ ಎರಡು ಬಾರಿ ಮನವಿ ಮಾಡಿದ್ದರು, ಅದಕ್ಕೆ ಯಾರೊಬ್ಬರು ತಲೆಕೆಡಿಸಿಕೊಂಡಿರಲಿಲ್ಲ. ಇದೀಗ ಮತ್ತೊಮ್ಮೆ ಯಡಿಯೂರಪ್ಪ ಅವರು ಪತ್ರ ಬರೆದಿದ್ದಾರೆ. ಒಂದು ವೇಳೆ ಶಾಸಕರು ಈ ಅನುದಾನ ಬಳಸದಿದ್ದರೆ, ಜಿಲ್ಲಾಧಿಕಾರಿಗಳ ಖಾತೆಯಿಂದ ಆರ್ಥಿಕ ಇಲಾಖೆಗೆ ಹೋಗಲಿದೆ.